ಪ್ರಪಂಚವು ನಮ್ಮನ್ನು ಯಾವಾಗಲೂ ಸಂತೋಷವಾಗಿ ಇರಿಸುವುದರಲ್ಲಿಯೇ ನಿರತವಾಗಿರಬೇಕು ಎಂದು ನಮ್ಮ ಅಹಂಕಾರವು ಬಯಸುತ್ತದೆ; ಅದು ಅಸಾಧ್ಯವಾದುದರಿಂದಲೇ ನಾವು ಪ್ರಪಂಚವನ್ನು ಯಾವಾಗಲೂ ದೂರುತ್ತೇವೆ ಎಂದು ಬ್ರಿಟನ್ನಿನ ಪ್ರಸಿದ್ಧ ನಾಟಕಕಾರ ಬರ್ನಾಡ್ ಷಾ ಹೇಳುತ್ತಾರೆ. ಬರ್ಟ್ರಂಡ್ ರಸೆಲ್ ಪ್ರಕಾರ, "ನಮ್ಮ 'ಅಹಂಕಾರ' ವು ಈ ಜಗತ್ತಿಗೆ ಹೋಲಿಸಿದಲ್ಲಿ ಅತ್ಯಲ್ಪವಾದುದು. ಇಂದ್ರಿಯಾತೀತವಾದ ಆತ್ಮವಸ್ತುವಿನಲ್ಲಿ ತನ್ನ ಚಿಂತನೆಗಳನ್ನು ಮತ್ತು ಆಶೆಗಳನ್ನು ಕೇಂದ್ರೀಕರಿಸಿಕೊಂಡಿರುವ ವ್ಯಕ್ತಿಯು, ಜೀವನದ ಸಾಧಾರಣ ಸಮಸ್ಯೆಗಳ ಮಧ್ಯದಲ್ಲಿಯೂ ಸ್ವಲ್ಪವಾದರೂ ಶಾಂತಿಯನ್ನು ಪಡೆಯಬಲ್ಲ. ಶುದ್ಧ ಅಹಂಕಾರಿಗೆ ಇದು ಅಸಾಧ್ಯ" (*Conquest of Happiness*, p.73).

ಈ 'ಅಪಕ್ವ ಅಹಂ'ನ ಪ್ರಜ್ಞೆಯಿಂದ ನಾವು ದೂರಸರಿದಂತೆಲ್ಲ, ಸಮಸ್ಯೆಗಳನ್ನು ವಾಸ್ತವಿಕ ದೃಷ್ಟಿಕೋನದಿಂದ ನೋಡಲು ನಮಗೆ ಸಾಧ್ಯವಾಗುತ್ತದೆ. ಪರದೆಯ ಮೇಲೆ ಬಂದುಹೋಗುವ ದೃಶ್ಯಗಳಂತೆ ನಮ್ಮೆಲ್ಲ ಅನುಭವಗಳೂ ಬಂದು ಹೋಗುತ್ತಿರುತ್ತವೆ. ಅವುಗಳ ಹಿನ್ನೆಲೆಯಲ್ಲಿ ಇರುವ ಪರದೆಗೆ ಇವು ಯಾವುದೇ ಪ್ರಭಾವ ಬೀರುವುದಿಲ್ಲ. ಇಲ್ಲಿ ಪರದೆ ಎಂದರೆ, ಚೈತನ್ಯಮಯವಾದ ಆತ್ಮ. ಅದೇ ನಮ್ಮ ನೈಜಸ್ವರೂಪ. ಅದರ ಜೊತೆಗೆ ಹೆಚ್ಚು ಹೆಚ್ಚು ನಾವು ತಾದಾತ್ಮ್ಯಗೊಂಡ ಹಾಗೆಲ್ಲ, ಸಮಸ್ಯೆಗಳ ಭರಾಟೆಯೂ ಕಡಮೆಯಾಗುತ್ತದೆ. ಅದಕ್ಕೆ ಬದಲಾಗಿ, 'ಅಹಂಕಾರ'ದ ಜೊತೆಗೆ ಹೆಚ್ಚು ಹೆಚ್ಚು ತಾದಾತ್ಮ್ಯಗೊಂಡಾಗ, ಸಮಸ್ಯೆಗಳ ಪ್ರಮಾಣವೂ ಅಧಿಕವಾಗುತ್ತದೆ.

'ಅಹಂಕಾರ'ವೆಂಬುದು ನೈಜ ಅನುಭವದ ಮಾರ್ಗದಲ್ಲಿನ ದೊಡ್ಡ ಅಡ್ಡಿ. ನೈಜ ಅನುಭವವೆಂದರೆ, 'ಸತ್' ಎಂದರೆ ಬರೀ ಇರುವುದು. ಅದು ಪರಿಪೂರ್ಣವಾದುದು. ನಾವು ಸ್ವಭಾವತಃ 'ಸತ್' ಸ್ವರೂಪರಾಗಿದ್ದೇವೆ. ಅದೇ ರೀತಿ ನಾವು 'ಚಿತ್' ಮತ್ತು 'ಆನಂದ' ಸ್ವರೂಪರೂ ಆಗಿದ್ದೇವೆ. ಅಂದರೆ ಜ್ಞಾನವೇ ನಮ್ಮ ಸ್ವರೂಪ, ದುಃಖವಿಹೀನವಾದ ಅನುಭವವೇ ನಮ್ಮ ಸ್ವರೂಪ. ಹೀಗಾಗಿ ಸಮಸ್ಯೆಗಳೆಂದು ತೋರುವ ಯಾವ ಬಾಹ್ಯ ಸಂಗತಿಗಳೂ ನಮ್ಮನ್ನು ಪ್ರಕ್ಷುಬ್ಧಗೊಳಿಸಲು ಸಾಧ್ಯವಿಲ್ಲ; ನಮಗೆ ಅವು ಯಾವ ರೀತಿಯ ಹಾನಿಯನ್ನೂ ಮಾಡಲು ಸಾಧ್ಯವಿಲ್ಲ. ಆದರೆ ಅಹಂಕಾರವು, 'ಬಾಹ್ಯ ಸಂಗತಿಗಳು ನಮ್ಮ ಮೇಲೆ ಪರಿಣಾಮ ಬೀರುತ್ತಿವೆ' ಎಂಬ ಭ್ರಮೆಯನ್ನು ಉಂಟುಮಾಡುತ್ತದೆ; ಅಕ್ಷರಶಃ, 'ಇಲ್ಲದ ಸಮಸ್ಯೆಗಳನ್ನು' ಸೃಷ್ಟಿಸುತ್ತದೆ.

'ನಾನು ಹೆಚ್ಚಿನವನು' ಎಂದು ಭಾವಿಸಿಕೊಳ್ಳುವುದು ಅಹಂಕಾರದ ಒಂದು ಮುಖ. ಹಾಗೆಯೇ 'ನಾನು ಬಹಳ ಕೀಳುಮಟ್ಟದವನು' ಎಂದು ಭಾವಿಸಿಕೊಳ್ಳುವುದೂ ಅದರದೇ ಇನ್ನೊಂದು ಮುಖ. ನಾವು ಹೆಚ್ಚಿನವರೂ ಅಲ್ಲ, ಕಡಮೆಯವರೂ ಅಲ್ಲ. ನಮ್ಮ ನೈಜಸ್ವರೂಪಕ್ಕೆ ಏನನ್ನೂ ಸೇರಿಸಲು ಆಗುವುದಿಲ್ಲ, ಅದರಿಂದ ಏನನ್ನೂ ಕಳೆಯಲೂ ಆಗುವುದಿಲ್ಲ. ಹಾಗೆ ಮಾಡಬಹುದೆಂದು ಭಾವಿಸಿಕೊಳ್ಳುವುದೇ ಭ್ರಮೆ. ಇಂಥ ಭ್ರಮೆಯೇ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಜನರು ಸಮಸ್ಯೆಗಳಿಂದ ನರಳುವುದು ಈ ಬಗೆಯ ಅವಾಸ್ತವ ದೃಷ್ಟಿಕೋನದಿಂದಲೇ. ವೇದಾಂತವು ಬೋಧಿಸುವ ವಾಸ್ತವದೃಷ್ಟಿಯು ಈ ಭ್ರಮಾಲೋಕದಿಂದ ಹೊರಬರಲು ನಮಗೆ ಸಹಾಯ ಮಾಡುತ್ತದೆ; ನಮ್ಮನ್ನೂ ಜಗತ್ತನ್ನೂ ಜೀವನವನ್ನೂ ಸರಿಯಾದ ದೃಷ್ಟಿಯಿಂದ ಪರಿಭಾವಿಸುವ ಹಾಗೆ ಮಾಡುತ್ತದೆ.

## ಹಣದ ಸಮಸ್ಯೆ

ಹಣ ನಮ್ಮ ಬದುಕಿನ ಮೂಲಭೂತ ಆವಶ್ಯಕತೆಗಳಲ್ಲಿ ಒಂದು. ನಮ್ಮಲ್ಲಿ ಬಹುಪಾಲು ಜನರಿಗೆ ಅದೊಂದೇ ಮೌಲ್ಯವೆಂದು ಅನ್ನಿಸುತ್ತದೆ. ಹಾಗೆಂದೇ ಒಬ್ಬ ಇಂಗ್ಲಿಷ್ ಲೇಖಕರು, Pay, Promotion and Pleasure (ವರಮಾನ, ಬಡ್ತಿ, ಸುಖ) – ಇವೇ ಜೀವನಮೌಲ್ಯಗಳೆಂದು ಜನರು ಪರಿಗಣಿಸುತ್ತಾರೆ ಎಂದು ಹೇಳುತ್ತಾರೆ. ನಮ್ಮ ಐಹಿಕ ಸುಖ ಹಣದ ಮೇಲೆಯೇ ಅವಲಂಬಿಸಿದೆ. ಅದು ಕಡಮೆಯಾಗಿದ್ದರೆ, ಸುಖವೂ ಕಡಮೆ. ಅದು ಹೆಚ್ಚಿದಂತೆಲ್ಲ ಸುಖದ ಪರಿಣಾಮವೂ ಅಧಿಕ.

**ಹಣಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. 'ಪ್ರೀತಿ'ಯ ಸಹಭಾಗಿಯಾಗಿದ್ದಾಗ, ಅದು ಮನುಷ್ಯನ ಹರ್ಷದ ಆಕರಗಳಲ್ಲಿ ಅತ್ಯಂತ ಶ್ರೇಷ್ಠವಾದುದೆಂದು ಹೇಳಬಹುದು. ಆದರೆ 'ಮೃತ್ಯು' ಸನಿಹವೇ ಇರುವಾಗ, ಅದೇ ಹಣವು, ಕಳವಳದ ಅತ್ಯಂತ ಭಯಾನಕ ಮೂಲವೂ ಆಗಿಬಿಡುತ್ತದೆ.**

*– ಜಾನ್ ಕೆನಿತ್ ಗಾಲ್‌ಬ್ರೈತ್*

ಹೀಗಿರುವಾಗ ಇಡೀ ಜಗತ್ತು ಹಣದ ಹಿಂದೆ ಧಾವಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನು? ಹಣದ ಸಮಸ್ಯೆಗೆ ಒಂದೇ ಪರಿಹಾರ. ಇದ್ದಷ್ಟು ಹಣದಲ್ಲಿ ತೃಪ್ತಿಯನ್ನು ಕಾಣುವುದು; ಅದೇ ಸಮಯದಲ್ಲಿ, ಇನ್ನಷ್ಟು ಹಣವನ್ನು ಸಂಪಾದಿಸುವುದಕ್ಕೆ ಉಪಾಯಗಳನ್ನು ಹುಡುಕುವುದು. ಆ ಉಪಾಯಗಳು ನ್ಯಾಯಯುತವಾಗಿರಬೇಕು, ಅಷ್ಟೇ. ಹಣದ ಅಭಾವವು ಒಂದು ಸಮಸ್ಯೆಯಾಗುವುದು, ಲೋಭ ಇದ್ದಾಗ ಮಾತ್ರ. ಎಷ್ಟು ಹಣ ಗಳಿಸಿದರೂ, ಅದು ಸಾಲದೆಂಬ ಭ್ರಮೆಯನ್ನು ಲೋಭ ಉಂಟುಮಾಡುತ್ತದೆ; ಅದಕ್ಕಾಗಿ ಯಾವಾಗಲೂ ತವಕಪಡುವಂತೆ ಮಾಡುತ್ತದೆ. ಅದಕ್ಕೇ ಎಂತಹ ಶ್ರೀಮಂತರು ಕೂಡ, ಇನ್ನೂ ಹೆಚ್ಚು ಹೆಚ್ಚು ಹಣ ಸಂಪಾದಿಸಲು ಮುಗಿಬೀಳುತ್ತಾರೆ. ಈ ಪ್ರಯತ್ನದಲ್ಲಿ ಬಾಳು ನಮಗಿತ್ತ ಸಹಜ ಸುಂದರ ಕೊಡುಗೆಗಳನ್ನು ಅನುಭವಿಸಿ ಆನಂದಿಸಲು ಮರೆತುಬಿಡುತ್ತಾರೆ. ಅಮೆರಿಕದ ಜನರು ಹಣದ ಹಿಂದೆ ಧಾವಿಸುತ್ತಾರೆ ಎಂಬ ಪ್ರತೀತಿ ನಮ್ಮಲ್ಲಿದೆ. ಆದರೆ ಅಮೆರಿಕದ ಈಗಿನ ಅಧ್ಯಕ್ಷರಾದ ಬರಾಕ್ ಒಬಾಮಾ ಹಣದ ಬಗ್ಗೆ ಹೇಳುವುದನ್ನು ಕೇಳಿ: "Focusing your life solely on making a buck shows a poverty of ambition. It asks too little of yourself. And it will leave you unfulfilled" (ನಿಮ್ಮ ಇಡೀ ಜೀವನವನ್ನು ಕೇವಲ ಹಣ ಗಳಿಸುವುದರಲ್ಲಿಯೆ ನೀವು

ತೊಡಗಿಸಿಕೊಂಡರೆ, ಅದು ನಿಮ್ಮಲ್ಲಿರುವ ಮಹತ್ವಾಕಾಂಕ್ಷೆಯ ದಾರಿದ್ರ್ಯವನ್ನು ಎತ್ತಿತೋರಿಸುತ್ತದೆ. ಅದು ನಿಮ್ಮ ಸಾಮರ್ಥ್ಯದ ಅಲ್ಪಭಾಗವನ್ನು ಮಾತ್ರವೇ ಅಪೇಕ್ಷಿಸುತ್ತದೆ ಹಾಗೂ ನಿಮ್ಮನ್ನು ನಿಸ್ವಾರ್ಥಕರನ್ನಾಗಿ ಮಾಡಿಬಿಡುತ್ತದೆ.")

ಆಧುನಿಕ ಬದುಕು ಧಾವಂತದ ಬದುಕು. ಅದರಲ್ಲಿ ಹಣ ಗಳಿಸುವುದೇ ಪ್ರಮುಖ ಗುರಿ. ಇಂಥ ಪರಿಸ್ಥಿತಿಯಲ್ಲಿ ಮಾನಸಿಕ ಒತ್ತಡವು ಜಾಸ್ತಿಯಾಗುವುದರಲ್ಲಿ ಸಂದೇಹವೇ ಇಲ್ಲ. ಇಂತಹ ಒತ್ತಡದಿಂದ ಬದುಕು ಇನ್ನೂ ಅಸಹನೀಯವಾಗುತ್ತದೆ. ಅದಕ್ಕೆಂದೇ ಈ ಬಗೆಯ ವೇಗದ ಬದುಕನ್ನು ಬಾಳುತ್ತಿರುವವರಲ್ಲಿ, ಉದ್ವೇಗ, ಹತಾಶ ಮನೋಭಾವಗಳೂ ಹೆಚ್ಚು; ಆತ್ಮಹತ್ಯೆಯ ಪ್ರಕರಣಗಳೂ ಅಧಿಕ.

ಹಣ ಸುಖದ ಸಾಧನವೇ ಹೊರತು, ಅದರ ಗಳಿಕೆ ಮಾತ್ರವೇ ಸುಖವನ್ನು ತಂದುಕೊಂಡುವುದಿಲ್ಲ. ಉದಾಹರಣೆಗೆ, ಒಂದು ತಿಂಡಿಯನ್ನು ಕೊಂಡುಕೊಳ್ಳಲು ಬೇಕಾದ ಹಣ ನಮ್ಮಲ್ಲಿ ಇದ್ದರಷ್ಟೇ ಆ ತಿಂಡಿಯ ರುಚಿಯನ್ನು ನಾವು ಆಸ್ವಾದಿಸಲು ಸಾಧ್ಯವಿಲ್ಲ. ಆ ಹಣವನ್ನು ಖರ್ಚು ಮಾಡಿ, ತಿಂಡಿಯನ್ನು ಕೊಂಡುಕೊಂಡು, ತಿಂದು ರುಚಿ ನೋಡಿದಾಗ ಮಾತ್ರ ಸುಖ ಉಂಟಾಗುತ್ತದೆ. ಆದ್ದರಿಂದ ಹಣವನ್ನು ಕೂಡಿಹಾಕುವುದಕ್ಕೆ ಮಾತ್ರವೇ ಗಮನ ಕೊಡದೆ, ಬಾಳು ನಮಗೆ ನೀಡುವ ಸುಖಾನುಭವವನ್ನು ಯೋಗ್ಯ ರೀತಿಯಲ್ಲಿ, ನೈತಿಕತೆಯ ಚೌಕಟ್ಟಿನಲ್ಲಿ ಪಡೆದುಕೊಳ್ಳುವ ಕಡೆಗೆ ನಮ್ಮ ಗಮನ ಹರಿಯಬೇಕು. ಆಗ ಅಲ್ಪ ಹಣದಿಂದ ದೊರಕುವ ಸಾಧಾರಣ ರೀತಿಯ ಆಹಾರ, ವಸತಿ, ಸೌಲಭ್ಯಗಳೂ ನಮಗೆ ಆಪ್ಯಾಯಮಾನವಾಗುತ್ತವೆ. ಒಟ್ಟಿನಲ್ಲಿ ಕೇವಲ ಗಳಿಸಿದ ಹಣದ ಪ್ರಮಾಣದ ಬಗ್ಗೆ ಮಾತ್ರ ನಮ್ಮ ಗಮನವಿಲ್ಲದಿರಲಿ. ಅದನ್ನು ಸದುಪಯೋಗಪಡಿಸಿಕೊಂಡು, ನ್ಯಾಯಯುತವಾದ ರೀತಿಯಲ್ಲಿ ನಾವು ಪಡೆದುಕೊಳ್ಳುವ ಸುಖದ ಮೇಲೆ ಗಮನವಿರಲಿ. ಆ ಸಾತ್ವಿಕ ಸುಖವೇ ನಮ್ಮ ಆದ್ಯತೆಯ ವಿಷಯವಾಗಲಿ. ಇದನ್ನೇ ತೃಪ್ತಿ ಎನ್ನುವುದು. ಇದನ್ನು ಯಾವ ಪ್ರಮಾಣದಲ್ಲಿಯೂ ಅಳೆಯಲಾಗುವುದಿಲ್ಲ. ಆದರೆ, ಡಾ. ಅಲೆಕ್ಸಿಸ್ ಕ್ಯಾರೆಲ್ ಹೇಳುವಂತೆ, ಮಾನವನಲ್ಲಿ ಯಾವುದನ್ನು ಅಳೆಯಲಾಗದೋ, ಅವು ಅಳೆಯಲಾಗುವ ವಸ್ತುಗಳಿಗಿಂತ ಪ್ರಮುಖವಾದುವು (In man, things which are not measurable are more important than which are measurable – *Man, The Unknown*).

ನಂತರದ ಹಂತದಲ್ಲಿ ಈ ಜಗತ್ತು ನಮಗೆ ಕೊಡುವ ಸುಖದ ಅನಿತ್ಯತೆಯನ್ನೂ ನಾವು ವಿಚಾರಮಾಡಿನೋಡಬೇಕು. ದುಃಖವೇ ಸುಖವೆಂಬ ಭ್ರಾಂತಿಯನ್ನು ನಮ್ಮಲ್ಲಿ ಮೂಡಿಸುತ್ತಿದೆ ಎನ್ನುವುದನ್ನು ಮನಗಾಣಬೇಕು. ಈ ಬಗೆಯ ಚಿಂತನೆಯು ನಿತ್ಯವಾದ ವಸ್ತು ಯಾವುದು ಎನ್ನುವ ವಿಚಾರಕ್ಕೆ ನಮ್ಮನ್ನು ತೊಡಗಿಸುತ್ತದೆ. ಇದೇ ಅಧ್ಯಾತ್ಮ ಚಿಂತನೆ.

ಆಪತ್ಕಾಲದಲ್ಲಿ ಹಣದ ಅಭಾವ ಉಂಟಾದಾಗ ಕಳವಳಕ್ಕೆ ಈಡಾಗುತ್ತೇವೆ. ಇದು ಸಹಜವೇ. ಅಂಥ ಸಂದರ್ಭಗಳು ಬಂದೇಬರುತ್ತವೆ. ಆದರೆ ಅಂಥ ಸಂದರ್ಭಗಳ ಸಾಧ್ಯತೆಯನ್ನು ಯೋಚಿಸಿನೋಡಿ, ತಕ್ಕಷ್ಟು ಸಿದ್ಧತೆಯನ್ನು ಮಾಡಿಕೊಂಡರೆ, ಆತಂಕವು ಎಷ್ಟೋ ಕಡಮೆಯಾಗುತ್ತದೆ. ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಾಗ, ಹತಾಶರಾಗಬಾರದು. ಅಂಥ ಪರಿಸ್ಥಿತಿ ಬಹಳ ಕಾಲ ನಿಲ್ಲುವುದಿಲ್ಲ, ಬೇಗ ಸರಿದುಹೋಗುತ್ತದೆ ಎಂದು ಧೈರ್ಯ ತಾಳಬೇಕು. ಸಾಧ್ಯವಾದಷ್ಟು ಹಣ ಕೂಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲೇಬೇಕು. ಅದರೊಟ್ಟಿಗೆ ಎಂತಹ ವಿಷಮ ಪರಿಸ್ಥಿತಿಯನ್ನೂ ಸಹಿಸಿಕೊಳ್ಳಲು ಮನಸ್ಸನ್ನು ದೃಢ ಮಾಡಿಕೊಳ್ಳಬೇಕು. ಭಗವಂತನಲ್ಲಿ ಶರಣಾಗಬೇಕು. "ಏನೇ ಆಗಲಿ, ಅದು ಆತನ ಇಚ್ಛೆ" ಎಂಬ ಮನಃಪಕ್ವತೆಯನ್ನು ತಾಳಬೇಕು. ಇದರಿಂದ ಇಂಥ ಸಂದರ್ಭಗಳಲ್ಲಿ ನಾವು ಅನುಭವಿಸಬೇಕಾಗಿ ಬರುವ ಸಂಕಟದ ತೀವ್ರತೆ ಎಷ್ಟೋ ಕಡಮೆಯಾಗುತ್ತದೆ.

**ಸಂತೋಷ ಏವ ಪುರುಷಸ್ಯ ಪರಂ ನಿಧಾನಂ** – ಸುಭಾಷಿತವೊಂದು ಹೇಳುವಂತೆ ಸಂತೋಷವೇ ಶ್ರೇಷ್ಠವಾದ ಸಂಪತ್ತು. ಎಲ್ಲ ಸಂದರ್ಭಗಳಲ್ಲಿಯೂ ಸಂತೋಷವಾಗಿರುವ ಪ್ರವೃತ್ತಿ ಬೆಳೆಸಿಕೊಳ್ಳುವುದೇ ನಿಜವಾದ ಅರ್ಥದಲ್ಲಿ ಶ್ರೀಮಂತರಾಗುವ ಗುಟ್ಟು.

(ಮುಂದುವರಿಯುವುದು)

## ಹನುಮಂತನ ವಿನಯ

ಲಂಕೆಯಲ್ಲಿ ಇಂದ್ರಜಿತ್ತಿನ ಬ್ರಹ್ಮಾಸ್ತ್ರಕ್ಕೆ ಸಿಲುಕಿ ರಾಮಲಕ್ಷ್ಮಣರು ಮೈಮರೆತು ಬಿದ್ದಿದ್ದಾಗ, ವಿಭೀಷಣನೂ ಹನುಮಂತನೂ ಜಾಂಬವಂತನನ್ನು ಹುಡುಕುತ್ತ ಬಂದರು. ಏಟು ತಿಂದು, ಆಯಾಸದಿಂದ ಕಣ್ಣುಮುಚ್ಚಿಕೊಂಡು ಬಿದ್ದಿದ್ದ ಜಾಂಬವಂತನನ್ನು ಕಂಡರು. ವಿಭೀಷಣ ಜಾಂಬವಂತನ ಕುಶಲವನ್ನು ಕೇಳಿದ. ಜಾಂಬವಂತ ಕಾತರದಿಂದ ವಿಭೀಷಣನ ಕೈಗಳನ್ನು ಹಿಡಿದುಕೊಂಡು, "ಅಪ್ಪಾ, ಆಂಜನೇಯ ಕ್ಷೇಮವಾಗಿದ್ದಾನೆಯೇ? ಅವನಿಗೆ ಏನೂ ಹಾನಿಯಾಗಿಲ್ಲವಷ್ಟೇ?" ಎಂದು ಕೇಳಿದ. ಅವನ ಪ್ರಶ್ನೆಯನ್ನು ಕೇಳಿ ವಿಭೀಷಣನಿಗೆ ಆಶ್ಚರ್ಯವಾಯಿತು. "ತಾತಾ, ರಾಮಲಕ್ಷ್ಮಣರ ಕ್ಷೇಮವನ್ನು ಕೇಳದೆ, ಸುಗ್ರೀವ ಅಂಗದರ ಸ್ಥಿತಿಯನ್ನು ವಿಚಾರಿಸದೆ, ಹನುಮಂತನ ಹಿತವನ್ನು ಮಾತ್ರ ವಿಚಾರಿಸುತ್ತಿದ್ದೀಯಲ್ಲಾ? ಇದಕ್ಕೆ ಕಾರಣವೇನೆಂದು ತಿಳಿಯಬಹುದೇ?" ಎಂದ. ಅದಕ್ಕೆ ಜಾಂಬವಂತ, "ಅಪ್ಪಾ, ಹನುಮಂತ ಒಬ್ಬ ಬದುಕಿದ್ದರೆ, ಉಳಿದವರು ಸತ್ತಿದ್ದರೂ, ಅವರನ್ನು ಬದುಕಿಸಬಹುದು. ಅವನೊಬ್ಬ ಇಲ್ಲದೆ ಹೋದರೆ, ಉಳಿದವರು ಇದ್ದರೂ ಸತ್ತಂತೆಯೇ. ಹೇಳು, ಆಂಜನೇಯ ಎಲ್ಲಿದ್ದಾನೆ, ಹೇಳು?" ಎಂದ. ಆಗ ಆಂಜನೇಯನು ತನ್ನ ಹೆಸರನ್ನು ಹೇಳಿಕೊಂಡು, ಜಾಂಬವಂತನ ಕಾಲುಗಳಿಗೆ ತಲೆಯಿಟ್ಟು ನಮಸ್ಕಾರ ಮಾಡಿದ. ಜಾಂಬವಂತ ಅವನಿಗೆ ಹಿಮಾಲಯದಲ್ಲಿರುವ ಓಷಧಿಪರ್ವತಕ್ಕೆ ಹೋಗಿ, ಮೂಲಿಕೆಗಳನ್ನು ತರಲು ಹೇಳಿದ. ಆಂಜನೇಯ ಓಷಧಿಪರ್ವತವನ್ನೇ ಕಿತ್ತು ತಂದ. ಹೀಗೆ ಅನೇಕ ಅದ್ಭುತಕಾರ್ಯಗಳನ್ನು ಹನುಮಂತ ಸಾಧಿಸಿದನಾದರೂ, ತನ್ನ ವಿಷಯ ಹೇಳಿಕೊಳ್ಳುವಾಗ, "ಸುಗ್ರೀವನ ಸನ್ನಿಧಿಯಲ್ಲಿ ನನಗಿಂತ ಚಿಕ್ಕವರಾದವರು ಯಾರೂ ಇಲ್ಲ" ಎಂದ. ಇದು ಹನುಮಂತನ ವಿನಯ! – **ಜಿ.ಪಿ.ರಾಜರತ್ನಂ** (ವಿಚಾರರಶ್ಮಿ – ೧, ಪುಟ ೨೨೦)




**ವಾಲ್ಮೀಕಿ ರಾಮಾಯಣವು ಆದಿಕಾವ್ಯ; ಭಾರತೀಯ ಸಂಸ್ಕೃತಿ ಮತ್ತು ಸಭ್ಯತೆಗಳ ರತ್ನಕೋಶ. ಇದರ ಮೌಲ್ಯಯುತ ಅಧ್ಯಯನವನ್ನು ಈ ಲೇಖನದಲ್ಲಿ ಮಾಡಿರುವ ಪರಮ ಪೂಜನೀಯ ಸ್ವಾಮೀಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಶಾಸ್ತ್ರೀಯ ವಿಷಯಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿರುವ ಇವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.**

## ಪ್ರವೇಶ

ಸಹಸ್ರಾರು ವರ್ಷಗಳಿಂದ ಕೋಟ್ಯಂತರ ಹಿಂದೂಗಳ ಬದುಕು, ಚಿಂತನೆ ಮತ್ತು ಸಂಸ್ಕೃತಿಗಳ ಮೇಲೆ ಗಾಢವಾದ ಪ್ರಭಾವ ಬೀರಿರುವ ಒಂದು ಪವಿತ್ರ ಗ್ರಂಥವಿದ್ದರೆ, ಅದು ನಿಸ್ಸಂದೇಹವಾಗಿ ವಾಲ್ಮೀಕಿಯ ರಾಮಾಯಣ. ಸಾಹಿತ್ಯ, ನಾಟಕ, ಸಂಗೀತ, ಕಲೆ, ಶಿಲ್ಪ ಮುಂತಾದ ಹಿಂದೂಧರ್ಮ ಹಾಗೂ ಸಂಸ್ಕೃತಿಗಳ ಯಾವುದೊಂದು ಅಂಶದ ಮೇಲೂ ಅದರ ಪ್ರಭಾವವಿಲ್ಲದೆ ಇಲ್ಲ. ರಾಮ ಲಕ್ಷ್ಮಣ ಸೀತೆ ಹನುಮಂತ ಭೇಟಿಕೊಟ್ಟಿರುವರೆಂದು ಹೇಳಿಕೊಳ್ಳದ ಯಾವ ಸ್ಥಳವೂ ಭರತಖಂಡದಲ್ಲಿ ಇದ್ದಂತಿಲ್ಲ. ಈ ಬಂಡೆಯ ಮೇಲೆ ಶ್ರೀರಾಮ ಪಾದ ಊರಿದ್ದನು; ಹನುಮಂತನ ಭಾರವನ್ನು ತಾಳಲಾರದೆ ಆ ಪರ್ವತ ಎರಡಾಗಿ ಸೀಳಿಹೋಯಿತು; ಸೀತೆ ಇಲ್ಲಿ ಬಟ್ಟೆ ಒಗೆದಿದ್ದಳಾದ್ದರಿಂದ ಈ ಝರಿಯ ನೀರು ಹೀಗೆ ಬಣ್ಣವಾಗಿದೆ – ಹೀಗೆ ಇಂದಿಗೂ ಮುಗ್ಧರಾದ ಭಾರತದ ಗ್ರಾಮೀಣ ಜನರು ತಮಗೂ ರಾಮಾಯಣದ ವೀರರಿಗೂ ಒಂದು ಪ್ರೀತಿಯ ಬಂಧವನ್ನು ಕಲ್ಪಿಸಿಕೊಳ್ಳುತ್ತಾರೆ. ಆದಕಾರಣ, ಈ ಅದ್ಭುತ ಕಾವ್ಯದ ಒಂದು ಗೌರವಪೂರ್ಣ ಅಧ್ಯಯನ ಸಾಮಾಜಿಕ ಕ್ಷೇತ್ರದಲ್ಲಿ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರಲ್ಲಿ, ನಮ್ಮ ಆಂತರಿಕ ವಿಕಾಸ ಉನ್ನತಿಯನ್ನು ಸಾಧಿಸುವುದರಲ್ಲಿ ಒಂದಿನಿತು ನೆರವಾಗಬಹುದು.

## ವಾಲ್ಮೀಕಿ ಮತ್ತು ಅವನ ಕೃತಿ

ರಾಮಾಯಣ ಮಹಾಕಾವ್ಯವನ್ನು ರಚಿಸಿದ ಮಹರ್ಷಿ ವಾಲ್ಮೀಕಿಯು ರಾಮಕಥೆಯಲ್ಲಿ ಬರುವ ಪಾತ್ರಗಳಲ್ಲಿ ಒಬ್ಬನೂ ಹೌದು. ರಾಮನು ಅಯೋಧ್ಯೆಯನ್ನು ಬಿಟ್ಟು ವನವಾಸಕ್ಕೆ ತೆರಳಿದಾಗ ಪ್ರಾರಂಭದಲ್ಲಿ ಭೇಟಿಕೊಟ್ಟ ಋಷ್ಯಾಶ್ರಮಗಳಲ್ಲಿ ವಾಲ್ಮೀಕಿಯದೂ ಒಂದು. ರಾಮನು ಸೀತೆಯನ್ನು ಪರಿತ್ಯಾಗ ಮಾಡಿದಾಗ ವಾಲ್ಮೀಕಿಯೇ ಅವಳಿಗೆ ಆಶ್ರಯವನ್ನಿತ್ತು ಅವಳ ಅವಳಿ ಮಕ್ಕಳನ್ನೂ ಬೆಳೆಸಿದನು. ರಾಮಾಯಣದ ಕರ್ತೃವೂ, ಸಮಕಾಲೀನ ವ್ಯಕ್ತಿಯೂ ಆಗಿದ್ದರೂ, ಅವನು ತನ್ನ ಬಗೆಗೆ ಹೇಳಿಕೊಳ್ಳುವುದು ಅತ್ಯಲ್ಪ. ಆತನು ತನ್ನ ಜೀವನವನ್ನು ಭಗವಂತನ ಧ್ಯಾನಕ್ಕೂ ಮಾನವಸೇವೆಗಾಗಿಯೂ ಮುಡಿಪಾಗಿಟ್ಟ ಮಹರ್ಷಿಯಾಗಿದ್ದುದರಿಂದ ಹಾಗೆ ಮಾಡಿರುವುದೇ ಯೋಗ್ಯ.

ತಾನು ಪ್ರಚೇತಸ ಋಷಿಯ (ಕೆಲವೊಮ್ಮೆ ವರುಣನೂ ಈತನೂ ಒಂದೇ ಎನ್ನುವುದೂ ಉಂಟು) ಪುತ್ರನೆಂದು ಅವನು ಹೇಳಿಕೊಂಡಿದ್ದಾನೆ. ಅವನ ಶಿಷ್ಯರೇ ಆದ ಲವಕುಶರು ರಾಮನ ಆಸ್ಥಾನದಲ್ಲಿ ರಾಮಾಯಣ ಮಹಾಕಾವ್ಯವನ್ನು ಹಾಡಿದಾಗ ಅವರು ತಮ್ಮನ್ನು ಭಾರ್ಗವನಾದ (ಭೃಗು ವಂಶದವನಾದ) ಭಗವಾನ್ ವಾಲ್ಮೀಕಿಯ ಶಿಷ್ಯರು ಎಂದು ಪರಿಚಯಿಸಿಕೊಳ್ಳುತ್ತಾರೆ.

ಅಧ್ಯಾತ್ಮ ರಾಮಾಯಣ, ಆನಂದ ರಾಮಾಯಣ ಮತ್ತು ಭಾಗವತದಂತಹ ಇನ್ನಿತರ ಕೃತಿಗಳಲ್ಲಿ ಬರುವ ಕಥೆಗಳನ್ನೂ ಒಗ್ಗೂಡಿಸಿದಾಗ ವಾಲ್ಮೀಕಿಯ ಬಗ್ಗೆ ಇಷ್ಟನ್ನು ಹೇಳಬಹುದು: ಅವನು ಭೃಗುವಂಶದಲ್ಲಿ ಹುಟ್ಟಿದ ಬ್ರಾಹ್ಮಣ; ಅದೃಷ್ಟವು ಅವನನ್ನು ದರೋಡೆಕೋರರ ಒಂದು ಕುಟುಂಬದಲ್ಲಿ ಬೆಳೆಯುವಂತೆ ಮಾಡಿತು. ಆಕಸ್ಮಿಕವಾಗಿ ಸಂಭವಿಸಿದ ನಾರದನ ಅಥವಾ ಸಪ್ತರ್ಷಿಗಳ ಭೇಟಿ ಅವನ ಜೀವನದಲ್ಲಿ ಪರಿವರ್ತನೆಯನ್ನು ಉಂಟುಮಾಡಿತು. ರಾಮನಾಮವನ್ನು ಪುರಶ್ಚರಣ ಮಾಡುವ ಮೂಲಕ ಅವನು ಮಹರ್ಷಿಪದವನ್ನು ಪಡೆದನು. ಅವನ ಈ ತಪಸ್ಸಿನ ಕಾಲದಲ್ಲಿ ಅವನ ದೇಹದ ಸುತ್ತಲೂ ವಲ್ಮೀಕವೊಂದು (ಹುತ್ತ) ಬೆಳೆದಿದ್ದು, ಆತನನ್ನು ಕರೆದಾಗ ಅದರಿಂದ ಹೊರಗೆ ಬಂದುದರಿಂದ, ಅವನಿಗೆ 'ವಾಲ್ಮೀಕಿ' ಎಂದು ಹೆಸರಾಯಿತು.

ರಾಮಾಯಣದ ಮೂಲವನ್ನು ಕುರಿತ ಒಂದು ಕಥೆ ಕಾವ್ಯದ ಆರಂಭದಲ್ಲೇ ಬರುತ್ತದೆ. ಒಮ್ಮೆ ನಾರದನು ವಾಲ್ಮೀಕಿಯ ಆಶ್ರಮಕ್ಕೆ ಬಂದಾಗ ಅವನನ್ನು ವಾಲ್ಮೀಕಿಯು ಗೌರವಾದರಗಳಿಂದ ಸ್ವಾಗತಿಸುತ್ತಾನೆ. ಆಗ ನಾರದನನ್ನು ಅವನು ಒಂದು ಪ್ರಶ್ನೆ ಕೇಳುತ್ತಾನೆ. ಪರಿಪೂರ್ಣ ಮನುಷ್ಯನನ್ನಾಗಿಸುವ ಹದಿನಾರು ಮಹಾ ದಿವ್ಯಗುಣಗಳನ್ನು ಪಡೆದಿರುವ ಯಾವೊಬ್ಬನಾದರೂ ಈಗ ಇದ್ದಾನೆಯೇ ಎಂಬುದೇ ಆ ಪ್ರಶ್ನೆ. ಇದಕ್ಕೆ ಉತ್ತರವಾಗಿ ನಾರದನು ರಾಮನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುತ್ತಾನೆ.



ಅನಂತರ, ಈ ಕಥೆಯ ಗುಂಗಿನಲ್ಲಿಯೇ ಮುಳುಗಿದ ವಾಲ್ಮೀಕಿ ತಮಸಾ ನದಿಗೆ ಪ್ರಾತಃಕರ್ಮಗಳಿಗಾಗಿ ಹೋಗುತ್ತಾನೆ. ಅಲ್ಲಿ ಪ್ರೇಮಮತ್ತವಾಗಿದ್ದ ಎರಡು ಪಕ್ಷಿಗಳಲ್ಲಿ ಗಂಡುಪಕ್ಷಿ ಬೇಡನೊಬ್ಬನ ಬಾಣದಿಂದ ಸಾಯುವುದನ್ನು ನೋಡುತ್ತಾನೆ. ಹೆಣ್ಣು ಪಕ್ಷಿಯ ಆರ್ತನಾದದಿಂದ ತೀವ್ರವಾಗಿ ನೊಂದ ಋಷಿಯು ತನಗರಿವಿಲ್ಲದಂತೆಯೇ ಬೇಡನನ್ನು ಶಪಿಸುತ್ತಾನೆ. ಈ ಶಾಪವು ಒಂದು ಛಂದೋಬದ್ಧ ಶ್ಲೋಕದ ರೂಪದಲ್ಲಿ ಹೊರಬೀಳುತ್ತದೆ; ಇದರಿಂದ ಋಷಿಗೂ ಅಚ್ಚರಿಯಾಗುತ್ತದೆ. ಆಶ್ರಮಕ್ಕೆ ಹಿಂದಿರುಗಿದ ನಂತರ ಅಲ್ಲಿ ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನು ಪ್ರತ್ಯಕ್ಷನಾಗಿ, "ನಾರದ ಮಹರ್ಷಿಯಿಂದ ನೀನು ಕೇಳಿದ ರಾಮಕಥೆಯನ್ನು ಈಗ ಹೊಸದಾಗಿ ಕಂಡುಕೊಂಡಿರುವ ಈ ಶ್ಲೋಕರೂಪದಲ್ಲಿಯೇ ಕಾವ್ಯವಾಗಿ ಬರೆ" ಎಂದು ಆದೇಶಿಸುತ್ತಾನೆ. "ಕಥೆಗೆ ಸಂಬಂಧಿಸಿದ ಸಮಸ್ತ ರಹಸ್ಯಗಳೂ ನಿನಗೆ ಅರಿವಾಗಲಿ, ಸಮಸ್ತ ಘಟನೆಗಳೂ ನಿನ್ನ ಬಗೆಗಣ್ಣಿಗೆ ಕಾಣಿಸುವಂತಾಗಲಿ" ಎಂಬ ವರವನ್ನೂ ಕೊಡುತ್ತಾನೆ.

ಅಂತೆಯೇ ವಾಲ್ಮೀಕಿಯು ಈ ಕಾವ್ಯವನ್ನು ರಚಿಸಿ ಅದಕ್ಕೆ 'ರಾಮಾಯಣ' (ನಡತೆಯ ಮಾರ್ಗ ಅಥವಾ ರಾಮನ ಕಥೆ) ಎಂದು ಹೆಸರಿಟ್ಟನು. ಅನಂತರ ಅವನು ಅದನ್ನು ರಾಮಸೀತೆಯರ ಅವಳಿಮಕ್ಕಳಾದ ಲವ ಮತ್ತು ಕುಶರಿಗೆ ಹೇಳಿಕೊಟ್ಟನು. ಲವ–ಕುಶರ ಮೂಲಕ ರಾಮಾಯಣವು ಜನಪ್ರಿಯವಾಗಿ ಎಲ್ಲರಿಂದ ಮನ್ನಣೆ ಪಡೆಯಿತು.

### ಕೃತಿಯ ಕಾಲ

ಸಾಂಪ್ರದಾಯಿಕ ಹಿಂದೂ ದೃಷ್ಟಿಯನ್ನು ಒಪ್ಪಿಕೊಳ್ಳುವುದಾದರೆ, ವಾಲ್ಮೀಕಿಯ ಹಾಗೂ ಕೃತಿಯ ಕಾಲ ಕ್ರಿ.ಪೂ. ಸುಮಾರು ೪೪೦೦ರ ಆಸುಪಾಸಿನದಾಗುತ್ತದೆ.

ಒಂದು ದೃಷ್ಟಿಕೋನದ ಪ್ರಕಾರ, ರಾಮನ ಜೀವನಕ್ಕೆ ಸಂಬಂಧಿಸಿದ ಕೆಲವು ಕಾಲಗಳು ಹೀಗಿವೆ: ಜನನ ಕ್ರಿ.ಪೂ. ೪೩೪೨; ಸೀತೆಯೊಡನೆ ವಿವಾಹ ಕ್ರಿ.ಪೂ. ೪೩೨೭; ವನವಾಸಕ್ಕೆ ತೆರಳಿದ್ದು ಕ್ರಿ.ಪೂ. ೪೩೧೫; ಅಯೋಧ್ಯೆಗೆ ಹಿಂದಿರುಗಿದ್ದು ಹಾಗೂ ಪಟ್ಟಾಭಿಷೇಕ ಕ್ರಿ.ಪೂ. ೪೩೦೧ (ಡಿ. ಎಸ್. ತ್ರಿವೇದಿ, *Indian Chronology,* ಭಾರತೀಯ ವಿದ್ಯಾಭವನ, ಮುಂಬಯಿ, ೧೯೬೩).

ಅದೇನೇ ಇರಲಿ, ಆಧುನಿಕ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ಈ ಕೃತಿಯು ಕ್ರಿ.ಪೂ. ೪೦೦–೨೦೦ ರಷ್ಟು ಇತ್ತೀಚಿನದೆಂದು ಹೇಳುವುದೇ ರೂಢಿಯಾಗಿದೆ. ರಾಮಾಯಣದ ಮೂಲವನ್ನು ಬೌದ್ಧರ 'ದಶರಥ ಜಾತಕ'ದಲ್ಲಿ ಅರಸುವ, ರಾಮನನ್ನು ಈಜಿಪ್ಟಿನ ಒಬ್ಬ ಫೆರೋ ದೊರೆ ಎಂದು ವಾದಿಸುವ ಪ್ರಯತ್ನಗಳೂ ನಡೆದಿವೆ. ಅಂಥವುಗಳನ್ನು ಉಪೇಕ್ಷಿಸಬಹುದಾಗಿದೆ.

### ರಾಮಾಯಣ ಕಾವ್ಯಗ್ರಂಥ

ಈಗ ನಮಗೆ ಲಭ್ಯವಿರುವ ಗ್ರಂಥದಲ್ಲಿ ೨೪,೦೦೦ – ನಿಖರವಾಗಿ ಹೇಳುವುದಾದರೆ ೨೪, ೨೫೩ ಶ್ಲೋಕಗಳಿವೆ. ಇದನ್ನು ಏಳು ಕಾಂಡಗಳಾಗಿ ವಿಭಾಗಿಸಲಾಗಿದೆ. ಒಂದೊಂದು ಕಾಂಡದಲ್ಲೂ ಹಲವಾರು ಶ್ಲೋಕಗಳಿಂದ ಕೂಡಿದ ಅನೇಕ ಸರ್ಗಗಳಿವೆ (ಒಟ್ಟು ೬೪೭ ಸರ್ಗಗಳು). ಹೆಚ್ಚುಕಡಿಮೆ ಇಡೀ ಕಾವ್ಯ ಅನುಷ್ಟುಪ್ ಛಂದಸ್ಸಿನಲ್ಲಿದ್ದರೂ, ಇಂದ್ರವಜ್ರ ಮಹೇಂದ್ರವಜ್ರಗಳಂತಹ ದೊಡ್ಡ ಛಂದಸ್ಸುಗಳ ಬಳಕೆಯೂ ಇದೆ.

### ರಾಮಾಯಣದಲ್ಲಿನ ಸಂಸ್ಕೃತಿ ಮತ್ತು ನಾಗರಿಕತೆ

ಸಂಸ್ಕೃತಿ ಮತ್ತು ನಾಗರಿಕತೆಗಳು ಯಾವಾಗಲೂ ಒಟ್ಟಿಗೇ ಮುನ್ನಡೆಯುವುದಿಲ್ಲ ಅಥವಾ ಮುನ್ನಡೆಯಬೇಕಾದುದಿಲ್ಲ. ನಾಗರಿಕತೆಯ ಮುನ್ನಡೆಯು ಸಂಸ್ಕೃತಿಯನ್ನು ಪರಿಷ್ಕರಿಸಿ ಉತ್ತಮಗೊಳಿಸಲೇಬೇಕೆನ್ನುವ ಆವಶ್ಯಕತೆಯೂ ಇಲ್ಲ. ನಾಗರಿಕತೆ